# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

## ಎಸ್.ಸಿ. ನಂ. 75/2025

**ಫಿರ್ಯಾದುದಾರರುಃ** **ಸರ್ಕಾರದ ಪರವಾಗಿ, ಗದಗ ಗ್ರಾಮೀಣ ಪೋಲೀಸ್ ಠಾಣೆ.**

**- ವಿರುದ್ಧ -**

**ಆರೋಪಿಃ** **ಮೈಲಾರಪ್ಪ @ ಮೈಲಾರಿ ತಂದೆಃ ಫಕ್ಕೀರಪ್ಪ ಕೋಳೂರು,**
**ವಯಸ್ಸುಃ 32 ವರ್ಷ, ಉದ್ಯೋಗಃ ಆಟೋ ಚಾಲಕ,**
**ಸಾಃ ಗದಗ.**

***

## :ದೋಷಾರೋಪಣೆ:

ನಾನು, **ಶ್ರೀಮತಿ ನಾಗವೇಣಿ, ಬಿ.ಎ., ಎಲ್.ಎಲ್.ಬಿ.,** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಗದಗ ಆದ ನಾನು ನಿಮ್ಮ ಮೇಲೆ ಆರೋಪಿಸುವುದೇನೆಂದರೆ,

ಗದಗ ಗ್ರಾಮೀಣ ಪೋಲೀಸ ಠಾಣೆಯ ವ್ಯಾಪ್ತಿಯ ಅಸುಂಡಿ ಗ್ರಾಮದ ಚಾಸಾ-1- ಹುಚ್ಚುಸಾಬ ತಂದೆಃ ಹುಸೇನಸಾಬ ನದಾಫ ಇವರ ಮಗಳಾದ ಮೃತ ಸೈರಾಬಾನು ಇವಳು ಈ ಹಿಂದೆ ಗದಗ ಶಹರದ ಶ್ರೀ ಪ್ರಭುರಾಜೇಂದ್ರ ಶಾರೀರಿಕ ಶಿಕ್ಷಣ ಮಹಾವಿದ್ಯಾಲಯದಲ್ಲಿ **B.P.Ed.** ಓದುವ ಕಾಲಕ್ಕೆ ಮಹಾವಿದ್ಯಾಲಯದಿಂದ ಆಗಾಗ ಗದಗ ಶಹರದ ಪಂಚಾಕ್ಷರಿ ನಗರದಲ್ಲಿರುವ ಜಿಲ್ಲಾ ಕ್ರೀಡಾಂಗಣಕ್ಕೆ ಆಟೋಗಳಲ್ಲಿ ಹೋಗುವಾಗ, ಆಟೋ ಚಾಲಕರಾದ ಆರೋಪಿತರಾದ ನೀವು, ಮೃತ ಸೈರಾಬಾನು ಇವರಿಗೆ ಪರಿಚಯವಾಗಿ ನಂತರ ಆರೋಪಿತರಾದ ನೀವು, ಸದರಿ ಸೈರಾಬಾನು ಇವರ ಮೊಬೈಲ ನಂಬರನ್ನು ಪಡೆದು, ಅವಳೊಂದಿಗೆ ಸಲುಗೆಯಿಂದ ಮಾತನಾಡುತ್ತಾ ಬಂದು ನೀವಿಬ್ಬರೂ ಒಬ್ಬರಿಗೊಬ್ಬರು 2 – 3 ವರ್ಷಗಳ ಕಾಲ ಪ್ರೀತಿಸಿದ್ದು, ನಂತರ ನಿಮ್ಮ ನಡುವೆ ಯಾವುದೋ ಕಾರಣಕ್ಕೆ ವೈಮನಸ್ಸು ಬಂದು ಸುಮಾರು 5 ವರ್ಷಗಳ ಕಾಲ ನಿಮ್ಮಿಬ್ಬರ ನಡುವೆ ಸಂಪರ್ಕ ಕಳೆದುಕೊಂಡಿದ್ದು ಇತ್ತು ಮತ್ತು ಈ ಅವಧಿಯ ನಡುವೆ ಸದರಿ ಮೃತ ಸೈರಾಬಾನು ಇವಳ ಮದುವೆಯು ಹೂವಿನಹಡಗಲಿ ತಾಲೂಕಿನ ಕಾನಳ್ಳಿ ಗ್ರಾಮದ

ಅಬುಬಕ್ಕರ ಸಿದ್ದಿಕಿ ಇವನೊಂದಿಗೆ ನಿಶ್ಚಯವಾಗಿದ್ದು ಮತ್ತು ದಿನಾಂಕಃ 08.05.2025 ರಂದು ಮದುವೆಯ ದಿನಾಂಕ ಕೂಡಾ ನಿಗಧಿಯಾಗಿದ್ದು ಇತ್ತು ಮತ್ತು ಈ ಘಟನೆಗೂ 4 ತಿಂಗಳ ಪೂರ್ವದಲ್ಲಿ ಆರೋಪಿತರಾದ ನೀವು, ನಿಮ್ಮ ಇನಸ್ಟಾಗ್ರಾಂ ಖಾತೆಯಿಂದ ಮೃತ ಸೈರಾಬಾನು ಇವಳ ಇನಸ್ಟಾಗ್ರಾಂ ಖಾತೆಗೆ ಮೆಸೇಜ್ ಮಾಡಿದ್ದು, ನಂತರ ನಿಮ್ಮಿಬ್ಬರ ಮಧ್ಯ ಮತ್ತೆ ಮೊಬೈಲನಲ್ಲಿ ಮಾತನಾಡುವುದು ಶುರುವಾಗಿ ದಿನಾಂಕಃ 10.04.2025 ರಂದು ಮೃತ ಸೈರಾಬಾನು ಇವಳ ಹುಟ್ಟು ಹಬ್ಬ ಇದ್ದ ಕಾರಣ ಆರೋಪಿತರಾದ ನೀವು ಅವರನ್ನು ಕೆಎ-26/ಎನ್-8079 ನಂಬರಿನ ಕಾರಿನಲ್ಲಿ ಸವದತ್ತಿ ಯಲ್ಲಮ್ಮ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ, ಅಲ್ಲಿ ಆರೋಪಿತರಾದ ನೀವು ನಿಮ್ಮ ಮೊಬೈಲನಲ್ಲಿ ನಿಮ್ಮಿಬ್ಬರ ಸೆಲ್ಫಿ (Selfie photo) ತೆಗೆದು, ಅಲ್ಲಿಂದ ಗದಗಕ್ಕೆ ವಾಪಸ್ ಬಂದು ಚಾಸಾ-19 ರವರಿಗೆ ಸೇರಿದ ವಿನಾಯಕ ಇವೆಂಟ್ಸದಲ್ಲಿ ಮೃತಳ ಬರ್ತಡೇ ಆಚರಣೆ ಮಾಡಿ, ಆ ಕಾಲಕ್ಕೆ ಕೂಡಾ ಆರೋಪಿತರಾದ ನೀವು ನಿಮ್ಮ ಮೊಬೈಲನಲ್ಲಿ ವಿಡಿಯೋ ಮಾಡಿಕೊಂಡು, ಫೋಟೋಗಳನ್ನು ತೆಗೆದಿದ್ದು, ನಂತರ ಆರೋಪಿತರಾದ ನೀವು ಮೃತಳಿಗೆ ನೀನು ಮದುವೆಯಾಗಿ ಹೋದರೆ, ನಿಮ್ಮ ಹತ್ತಿರ ಇರುವ ಫೋಟೋ ಮತ್ತು ವಿಡಿಯೋಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟು ನಿನ್ನ ಬಾಳ್ವೆ ಹಾಳು ಮಾಡುತ್ತೇನೆ ಅಂತಾ ಹೇಳುತ್ತಾ ಸೈರಾಬಾನು ಇವಳಿಗೆ ಹೆದರಿಸುತ್ತಾ ಬಂದಿದ್ದು, ದಿನಾಂಕಃ 20.04.2025 ರಂದು ಬೆಳಗಿನ ಜಾವ ಆರೋಪಿತರಾದ ನೀವು, ಮೃತ ಸೈರಾಬಾನು ಇವಳಿಗೆ ಇನಸ್ಟಾಗ್ರಾಂದಲ್ಲಿ ಹೆದರಿಸಿದ್ದರಿಂದ, ಮೃತಳು ಆರೋಪಿತರಾದ ನಿಮಗೆ ಹಾಗೆಲ್ಲ ಮಾಡಬೇಡಾ, ನನ್ನ ಮರ್ಯಾದೆ ಪ್ರಶ್ನೆ ಇದೆ, ಒಂದು ವೇಳೆ ನೀನು ಹಾಗೆ ಮಾಡಿದರೆ ನಾನು ಸತ್ತೇ ಹೋಗುತ್ತೇನೆ ಅಂತಾ ಹೇಳಿದಾಗ, ಸತ್ತರೆ ಸಾಯಿ ಎಂದು ನೀವು ಹೇಳಿದ್ದರಿಂದ, ಮೃತಳು **"ನನ್ನ ಸಾವಿಗೆ ನಾನೇ ಮಾಡಿದ ತಪ್ಪು ಅದು ಏನೆಂದರೆ, ಮೈಲಾರಿ ಎನ್ನುವ ಹುಡುಗನನ್ನು ನಾನು ಪ್ರೀತಿ ಮಾಡಿದೆ, ಅದು 5 ವರ್ಷಗಳ ಹಿಂದೆ ಬ್ರೇಕ್ ಅಪ್ ಆಯಿತು, ಮತ್ತೆ ಇವಾಗ ಅಂದರೆ 1 ತಿಂಗಳ ಹಿಂದೆ ಮತ್ತೆ ಮೀಟ ಆಗಿ ಅವರೆ ಇನಸ್ಟಾಗ್ರಾಂ ನಲ್ಲಿ ಮೆಸೇಜ್ ಮಾಡಿದ್ದರು. ನನ್ನ ಹುಟ್ಟಿದ ಹಬ್ಬವನ್ನು ಮಾಡಿದ್ದರು. ಅವರು ನನಗೆ ಮಾತು ಕೊಟ್ಟಿದ್ದರು. ನಿನಗೆ ಯಾವತ್ತೂ ತೊಂದರೆ ಬರದ ಹಾಗೆ ನೋಡಿಕೊಳ್ಳುತ್ತೇನೆ ಎಂದು ಆದರೆ ಇವಾನ ನನ್ನ ಫೋಟೋ, ವಿಡಿಯೋ ಎಲ್ಲಾ ಇಟ್ಟುಕೊಂಡು ನನಗೆ ತೊಂದರೆ ಮಾಡುತ್ತಿದ್ದಾರೆ ಆದಕ್ಕಾಗಿ ನಾನು ನನ್ನ ಸಾವಿನ ನಿರ್ಧಾರ**

**ಮಾಡಿದ್ದೇನೆ. ನನ್ನ ತಂದೆ ತಾಯಿಗೆ ಯಾವುದೇ ರೀತಿಯಾದ ತೊಂದರೆ ಆಗಬಾರದು. ನನ್ನನ್ನು ಕ್ಷಮಿಸಿ.''** ಅಂತಾ ಡೆತ್ ನೋಟ್ ಬರೆದಿಟ್ಟು, ಅದೇ ದಿನ ಅಂದರೆ ದಿನಾಂಕಃ **20.04.2025** ರಂದು ಮದ್ಯಾಹ್ನ **03.00** ಗಂಟೆಯ ಸುಮಾರಿಗೆ ಆರೋಪಿತರಾದ ನಿಮ್ಮ ಜೊತೆ ಇನಸ್ಟಾಗ್ರಾಂ ನಲ್ಲಿ ವಿಡಿಯೋ ಕಾಲನಲ್ಲಿ ಮಾತನಾಡುತ್ತಲೇ, ತನ್ನ ವಾಸದ ಮನೆಯ ಬೆಡ್ ರೂಮಿನಲ್ಲಿ ಮೇಲೆ ಇರುವ ಆ್ಯಂಗ್ಲರ ಪಟ್ಟಿಯ ಕಬ್ಬಿಣದ ಒಂಕಿಗೆ ಸೀರೆಯಿಂದ ನೇಣು ಹಾಕಿಕೊಂಡು ಮೃತಪಟ್ಟಿದ್ದು, ಆರೋಪಿತರಾದ ನೀವು ಆಕೆಗೆ ಆತ್ಮಹತ್ಯೆ ಮಾಡಿಕೊಳ್ಳಲು ದುಷ್ಪ್ರೇರಣೆ/ಪ್ರಚೋದನೆ ನೀಡಿ, ಅವಳು ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡಿ, **ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ 108 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುವಿರಿ.**

**ಕೊನೆಯದಾಗಿ**, ಆರೋಪಿತರಾದ ನೀವು, ಮೃತ ಸೈರಾಬಾನು ಇವರಿಗೆ ನೀನು ಮದುವೆಯಾಗಿ ಹೋದರೆ, ನಿಮ್ಮ ಹತ್ತಿರ ಇರುವ ಅವರ ಫೋಟೋ ಹಾಗೂ ವಿಡಿಯೋಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟು ನಿನ್ನ ಬಾಳ್ವೆ ಹಾಳು ಮಾಡುತ್ತೇನೆ ಅಂತಾ ಬೆದರಿಕೆ ಹಾಕಿ, **ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ 351(2) ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುವಿರಿ.**

**(ಈ ಆಪಾದನೆಯನ್ನು ದಿನಾಂಕಃ 14.01.2026 ರಂದು, ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ, ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಲಾಯಿತು.)**

**ಸಹಿ/-**

**(ನಾಗವೇಣಿ)**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಗದಗ**